www.ecourtsindia.com



**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿನಾಂಕ : 13.12.2023**
**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ ಎ.ಟಿ.ಎಂ ವಕೀಲರಿಂದ**

1. ನಾನು ಹೆಚ್.ಎ.ಎಲ್ ನ ನಿವೃತ್ತಿ ಹೊಂದಿರುತ್ತೇನೆ. ನಾನು ಬಿ.ಎಸ್ಸ್ ಪದವಿಧರೇ. ನಾನು 3 ಪ್ರಕರಣಗಳನ್ನು ಆರೋಪಿಯ ವಿರುದ್ದ ದಾಖಲಿಸಿದ್ದು 3 ಪ್ರಕರಣಗಳಲ್ಲಿ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ವಿಷಯವನ್ನು ಅರಿತುಕೊಂಡಿರುತ್ತೇನೆ. ನನ್ನ ಸಾಕ್ಷಿ ಪ್ರತಿಜ್ಞಾ ಲೇಖಾಕ್ಕೆ ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. 1978 ರಲ್ಲಿ ನಾನು ಹೆಚ್.ಎ.ಎಲ್ ನ ಕ್ಲರ್ಕ್ ಆಗಿ ಕೆಲಸಕ್ಕೆ ಸೇರಿಸಿಕೊಂಡಿರುತ್ತೇನೆ. 32 ವರ್ಷ ನಾನು ಕೆಲಸ ಮಾಡಿರುತ್ತೇನೆ. ನನ್ನ ಮೊದಲ ಸಂಬಳ ಪ್ರತಿ ತಿಂಗಳು ರೂ. 500. ನನ್ನ ನಿವೃತ್ತಿ ಸಮಯದಲ್ಲಿ ನನ್ನ ಪ್ರತಿ ತಿಂಗಳ ಸಂಬಳ ರೂ. 70 ಸಾವಿರ. 2011 ಏಪ್ರಿಲ್ ನಲ್ಲಿ ನಾನು ನಿವೃತ್ತಿ ಹೊಂದಿರುತ್ತೇನೆ. ಸುಮಾರು 25 ಲಕ್ಷ ನಿವೃತ್ತಿ ಹಣ ಬಂದಿರುತ್ತದೆ.

2. ಆರೋಪಿ ನನಗೆ 2005 ರಿಂದ ಪರಿಚಯ. ಆರೋಪಿ ನನ್ನ ಮಗನ ಜೊತೆ ಒಟ್ಟಿಗೆ ಕೆಲಸ ಮಾಡುತ್ತಿದ್ದರಿಂದ ಪರಿಚಯ. ಜನವರಿ 2012 ರಲ್ಲಿ ಆರೋಪಿ ನನ್ನ ಬಳಿ ಹಣ ಕೇಳಿರುತ್ತಾರೆ. ಯಾವ ತಾರೀಖು ಎಂದು ನಿಖರವಾಗಿ ಗೊತ್ತಿಲ್ಲ. ಜನವರಿ 2 ನೇ ವಾರ ಇರಬಹುದು. ಆರೋಪಿ  ಹಣ ಕೇಳಲು ನನ್ನ ಮಗನ ಜೊತೆ ಬಂದಿದ್ದರು. ಸಾಕ್ಷಿ ಮುಂದುವರೆದು ಅಲ್ಲದೇ ಆರೋಪಿಯ ಹೆಂಡತಿ ಫೋನ್ ಮೂಲಕ ಕೇಳಿದ್ದರು ಎಂದು ಹೇಳುತ್ತಾರೆ. ಆರೋಪಿ ತನ್ನ ಫಮ್ ಹೌಸ್ ನ್ನು ಅಭಿವೃದ್ದಿಪಡಿಸುವ ಸಲುವಾಗಿ ಹಣ ಕೇಳಿದ್ದರು. ಆರೋಪಿ ರೂ. 7 ಲಕ್ಷ ಹಣ ಕೇಳಿದ್ದರು. ನಾನು ಆರೋಪಿಗೆ ರೂ. 7 ಲಕ್ಷ ಹಣ ಕೊಟ್ಟಿರುತ್ತೇನೆ. ಜನವರಿ 2012 ರಲ್ಲಿ ಹಣ ಕೊಟ್ಟಿದ್ದು ಜನವರಿ 13 ,14 ನೇ ತಾರೀಖಿನಂದು ಕೊಟ್ಟಿರುತ್ತೇನೆ. ಆರೋಪಿ ಹಣ ಕೇಳಲು ಬಂದ ದಿನವೇ ನಾನು ಹಣ ಕೊಟ್ಟಿರುತ್ತೇನೆ. ನಾನು ಆರೋಪಿಗೆ ಚೆಕ್ ಮೂಲಕ ಹಣ ಕೊಟ್ಟಿರುತ್ತೇನೆ. ನಾನು ಪಂಜಾಬ್ ನ್ಯಾಷನಲ್ ಬ್ಯಾಂಕ್ ಚೆಕ್ ಮೂಲಕ ಹಣ ಕೊಟ್ಟ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಬ್ಯಾಂಕ್ ದಾಖಲೆಯನ್ನು ಹಾಜರುಪಡಿಸುತ್ತೇನೆಂದು ಹೇಳುತ್ತಾರೆ. ನಾನು ರೂ. 7 ಲಕ್ಷಕ್ಕೆ ಚೆಕ್ ಕೊಟ್ಟಿದ್ದೆ.

3. ನಾನು ಆರೋಪಿಯ ಫಮ್ ಹೌಸ್ ನ್ನು ನೋಡಿರುವುದಿಲ್ಲ. ಆರೋಪಿಗೆ ಎಷ್ಟು ಫಮ್ ಹೌಸ್ ಮತ್ತು ಎಷ್ಟು ಎಕರೆ ಇದೆ ಎನ್ನುವ ಮಾಹಿತಿ ಕೊಟ್ಟಿರುತ್ತಾರೆ. ಫಮ್ ಹೌಸ್ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ನಾನು ಆರೋಪಿಗೆ ಬಡ್ಡಿ ಕೇಳಿರುವುದಿಲ್ಲ. 2011 ರಲ್ಲಿ ನಾನು ಆದಾಯ ತೆರಿಗೆ ಪಾವತಿಸುತ್ತಿದ್ದೆ. ನಾನು ಆರೋಪಿಗೆ ಕೊಟ್ಟ ಹಣವನ್ನು ನನ್ನ ಆದಾಯ ತೆರಿಗೆ ರಿರ್ಟನ್ಸ್

This is a True Copy of the Court Records Online. Authenticated @ districts.ecourtsindia.com/cnr/KABC0C0139262022/truecopy/order-1.pdf

ನಲ್ಲಿ ತೋರಿಸಿರುವುದಿಲ್ಲ. ಆರೋಪಿಗೆ ಹಣ ಕೊಟ್ಟ ಬಗ್ಗೆ ರೂ. 5 ಲಕ್ಷಕ್ಕೆ ಒಂದು ಕರಾರು ಪತ್ರ ಬರೆದುಕೊಟ್ಟಿರುತ್ತಾರೆ. ಸದರಿ ಕರಾರು ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಕರಾರು ಪತ್ರವನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

34 ನೇ ಎಸಿಎಂಎಂ ನ್ಯಾಯಾಧೀಶರು,
ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC0C0139262022/truecopy/order-1.pdf